ದಿನಾಂಕ: 22.11.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಬಿ ಎನ್ ಟಿ ವಕೀಲರಿಂದಃ**

ನಮ್ಮ ಮೂಲ ಪುರುಷ ಗಿಡ್ಡೀರಪ್ಪನ ತಂದೆ ಹೆಸರು ಗಿಡ್ಡೀರಪ್ಪ. ಪ್ರತಿವಾದಿಯರ ಮೂಲ ಪುರುಷ ಗಿಡ್ಡೀರಪ್ಪನ ತಂದೆ ಹೆಸರು ಈರಪ್ಪ ಎಂದರೆ ಸರಿಯಲ್ಲ. ಈರಪ್ಪನ ಮಗ ಗಿಡ್ಡೀರಪ್ಪನಿಗೆ ಇಬ್ಬರು ಮಕ್ಕಳು ಎಂದರೆ ಸಾಕ್ಷಿ ಒಂದೇ ಹೆಣ್ಣು ಮಗಳು ಎಂದು ನುಡಿಯುತ್ತಾರೆ. ಈರಪ್ಪನ ಮಗ ಗಿಡ್ಡೀರಪ್ಪನಿಗೆ ಇಬ್ಬರು ಗಂಡು ಮಕ್ಕಳಿದ್ದು 1 ನೇ ಮಗ ಗಿಡ್ಡೀರಪ್ಪ 2 ನೇ ಮಗ ನಾಗಪ್ಪ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಹೆಸರು ಜಿ ನಾಗಪ್ಪ. ಜಿ ನಾಗಪ್ಪ ನ ತಂದೆ ಹೆಸರು ಗಿಡ್ಡೀರಪ್ಪ. ಜಿ. ನಾಗಪ್ಪನ ಅಣ್ಣನ ಹೆಸರು ಗಿಡ್ಡೀರಪ್ಪ ಎಂದರೆ ಸರಿ. ಜಿ ನಾಗಪ್ಪ ಮತ್ತು ಗಿಡ್ಡೀರಪ್ಪನ ತಂದೆ ಹೆಸರು ಗಿಡ್ಡೀರಪ್ಪ ಎಂದರೆ ನಿಜ.

ನಾಗಪ್ಪನ ಅಣ್ಣ ಗಿಡ್ಡೀರಪ್ಪನಿಗೆ ಒಬ್ಬಳೇ ಹೆಣ್ಣು ಮಗಳು. ಕಾಳಮ್ಮ ಮೃತಪಟ್ಟಿದ್ದಾಳೆ. ಸದರಿ ಕಾಳಮ್ಮನಿಗೆ ಭಾಗ್ಯಮ್ಮ ಮತ್ತು ತಿಮ್ಮಕ್ಕ ಎಂಬ ಮಕ್ಕಳು ಇದ್ದಾರೆ. ಭಾಗ್ಯಮ್ಮ ಮೃತ ಪಟ್ಟಿದ್ದಾಳೆ ಭಾಗ್ಯಮ್ಮನಿಗೆ ಗಂಡ ಮತ್ತು ಮಕ್ಕಳು ಇರುವುದಿಲ್ಲ. ತಿಮ್ಮಕ್ಕ ಜೀವಂತವಾಗಿದ್ದು ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. ಮೇಲೆ ಹೇಳಿದ ವಿಚಾರವನ್ನು ನಾನು ವಾದ ಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾನು ವಕೀಲರಿಗೆ ಹೇಳಿದ್ದೆ ಎಂದು ನುಡಿಯುತ್ತಾರೆ.

ನಾವು ಈರಪ್ಪನ ಮಗ ಗಿಡ್ಡೀರಪ್ಪನ ವಂಶಸ್ಥರು ಎಂದು ತೋರಿಸಲು ದಾಖಲೆಗಳು ಇವೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನಾವು ಈರಪ್ಪನ ಮಗ ಗಿಡ್ಡೀರಪ್ಪನ ವಂಶಸ್ಥರು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲದಿದ್ದರಿಂದ ಆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈರಪ್ಪನ ಮಗ ಗಿಡ್ಡೀರಪ್ಪನಿಗೆ ಮೂರು ಜನ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಗಿಡ್ಡೀರಪ್ಪ, ಮರಡಿ ರಂಗಪ್ಪ ಮತ್ತು ಜಿ ನಾಗಪ್ಪ ಎಂದು ಹೇಳುತ್ತಾರೆ. ಈರಪ್ಪನ ಮಗ ಗಿಡ್ಡೀರಪ್ಪನಿಗೆ ಮರಡಿ

ರಂಗಪ್ಪ ಎಂಬ ಮಗ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಹೆಸರು ಮೂಡ್ಲಪ್ಪ ನನ್ನ ತಂದೆ ಜೀವಂತ ಇಲ್ಲ. ನನ್ನ ತಂದೆಗೆ ನಾನೊಬ್ಬಳೇ ಮಗಳು. ನನ್ನ ತಾಯಿ ಹೆಸರು ನಾಗಮ್ಮ. ನನ್ನ ತಾಯಿ ನಾಗಮ್ಮ ಜೀವಂತವಾಗಿಲ್ಲ. ನಾಗಮ್ಮ ಮೃತ ಪಟ್ಟು 30-40 ವರ್ಷಗಳಾಗಿರಬಹುದು. ನಾನು ನಾಗಮ್ಮನ ಮಗಳು ಎಂದು ತೋರಿಸಲು ದಾಖಲೆಗಳನ್ನು ವಕೀಲರಿಗೆ ನೀಡಿದ್ದೇನೆ. ಈ ಪ್ರಕರಣದಲ್ಲಿ ನಾನು ಯಾವುದೇ ವಂಶವೃಕ್ಷವನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಈರಪ್ಪನ ಮಗ ಗಿಡ್ಡೀರಪ್ಪನ ಕುಟುಂಬಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಆಸ್ತಿ ನಂ.3 ಯಾರ ಹೆಸರಿಗೆ ಇದೆ ಎಂದು ಗೊತ್ತಿಲ್ಲ. ಅದರ ಚೆಕ್ಕು ಬಂದಿ ನೆನಪಿಲ್ಲ. ಐಟಂ ನಂ.3 ರ ಆಸ್ತಿಯನ್ನು 1 ನೇ ಪ್ರತಿವಾದಿ ತಂದೆ ನಾಗಪ್ಪನಿಗೆ ಇಮಾನ್ ಅಬಲಿಶ್ ಅಡಿಯಲ್ಲಿ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಐ ಟಂ ನಂ.1, 2, 4, 5 ನ್ನು ಗಿಡ್ಡೀರಪ್ಪನ ಮಗ ಗಿಡ್ಡೀರಪ್ಪನಿಗೆ ಡೆಪ್ಯುಟಿ ಕಮಿಷ್ ನರ್ ವರು ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಗಳು ಈರಪ್ಪನ ಮಗ ಗಿಡ್ಡೀರಪ್ಪನಿಗೆ ಸೇರಿವೆ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ ಆದರೆ ಅವು ಯಾವ ದಾಖಲೆಗಳು ಎಂದು ನನಗೆ ಹೇಳಲು ಬರುವುದಿಲ್ಲ. ಈರಪ್ಪನ ಮಗ ಗಿಡ್ಡೀರಪ್ಪ ಮೃತ ಪಟ್ಟಾಗ ಆತನಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳು ಈರಪ್ಪನ ಮಗ ಗಿಡ್ಡೀರಪ್ಪನಿಗೆ ಸೇರಿಲ್ಲ ಎಂದರೆ ಸರಿಯಲ್ಲ.

ಜಿ ನಾಗಪ್ಪನಿಗೆ ವೀರನಾಗಪ್ಪ ಮತ್ತು ಜಿ ವೀರಣ್ಣ ಎಂಬ ಇಬ್ಬರು ಮಕ್ಕಳು ಇದ್ದ ವಿಚಾರ ಗೊತ್ತು. 04.08.1976 ರಲ್ಲಿ ಜಿ ನಾಗಪ್ಪನಿಗೆ ವೀರನಾಗಪ್ಪ ಮತ್ತು ಜಿ ವೀರಣ್ಣ ರವರು ಕುಟುಬಂದ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ವೀರನಾಗಪ್ಪನಿಗೆ ಸರ್ವೆ ನಂ.35/12 ರಲ್ಲಿ 5 ಎಕರೆ 4 ಗುಂಟೆ ಹಿಸ್ಸೆ ಬಂತು ಎಂದರೆ

ಸರಿಯಲ್ಲ. ಜಿ ವೀರಣ್ಣನಿಗೆ ಸರ್ವೆ ನಂ.59/5 ರಲ್ಲಿ 1 ಎಕರೆ 22 ಗುಂಟೆ 59/6 ರಲ್ಲಿ 3 ಎಕರೆ 34 ಗುಂಟೆ ಬಂತು ಎಂದರೆ ಸರಿಯಲ್ಲ. ಜೀ ನಾಗಪ್ಪನಿಗೆ ಸರ್ವೆ ನಂ.72/1 ಕೃಷ್ಣಾಂಬುದಿ ಗ್ರಾಮದ ಆಸ್ತಿ ಬಂತು ಎಂದರೆ ಸರಿಯಲ್ಲ.

12.06.2008 ರಲ್ಲಿ ವೀರಣ್ಣನಿಗೆ ಬಂದ ಆಸ್ತಿಯನ್ನು ಅವರು ರಾಜಮ್ಮ ಎನ್ನುವವರಿಗೆ ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ. ಜಿ ನಾಗಪ್ಪನಿಗೆ ರಾಜಮ್ಮ ಎನ್ನುವ ಮಗಳು ಇದ್ದರು ಎಂದರೆ ನಿಜ. ನಾನು ಸದರಿ ರಾಜಮ್ಮನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. 16.07.2021 ರಲ್ಲಿ ವೀರಣ್ಣ ಸರ್ವೆ ನಂ.59/6 ರಲ್ಲಿ 3 ಎಕರೆ 36 ಗುಂಟೆಯನ್ನು ವಿ ರಂಗಸ್ವಾಮಿ ಮತ್ತು ಪ್ರಶಾಂತ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಿಪಿ-1 ರಿಂದ 7 ರ ಪಹಣಿಯು ಯಾರ ಹೆಸರಿಗೆ ಇದೆ ಎಂದು ನನಗೆ ನೆನಪಿಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ಈ ದಾವೆ ಸಲ್ಲಿಸುವಾಗ ನಿಪಿ-1 ರಿಂದ 7 ರ ಪಹಣಿಗಳು ಯಾರ ಹೆಸರಿಗೆ ಇವೆ ಎಂದು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿಗಳು ಏನು ತಕರಾರು ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ರಾ.ಹೆದ್ದಾರಿ ಪ್ರಾಧಿಕಾರದವರು ಯಾವ ಜಮೀನನ್ನು ಸ್ವಾದೀನ ಪಡಿಸಿಕೊಂಡಿದ್ದಾರೆ ಎಷ್ಟು ಪ್ರದೇಶ ಎಂದು ನನಗೆ ನೆನಪಿಲ್ಲ. ನಿಪಿ-8, 9 ಯಾವ ಸರ್ವೆ ನಂಬರಿಗೆ ಸಂಬಧಪಟ್ಟವು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಗಳಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಎಂದು ಹೇಳುವ ಮರಡಿ ರಂಗಪ್ಪನಿಗೂ ದಾವಾ ಸರ್ವೆ ನಂಬರ್ ಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಮರಡಿ ರಂಗಪ್ಪನ ಮೊಮ್ಮಗಳು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು